Sericulture (Central Grant for Improvement).

Q.—371. Sri G. NARAYANA GOWDA (Mulbagal-Srinivasapur),—

Will the Government be pleased to state :—

(*a*) whether they received any grants from the Central Government for the improvement of Sericulture in the State ;

(*b*) how they have spent the same ?

A.—Sri A. G. RAMACHANDRA RAO (Minister for Law and Education) [on behalf of SRI H. SIDDAVERAPPA (Minister for Home)].—

(*a*)— *In lakhs.*

Grants received	Rs.
1. Up to end of November 1955.	13·05
2. Received in latter part :—	
(i) December 1955 ... 9·27	
(ii) January 1956 ... 0·84	10·11
Total ...	23·16

(*b*)— *In lakhs*

Amount spent	Rs.
1. Up to end of January 1956 (Approximately).	4·09
2. Probable amount expected to be spent in February 1956 and March 1956.	3·21

(For details, please see Appendix appended to Question No. 352).

ಶ್ರೀ ಜಿ. ನಾರಾಯಣಗೌಡ.—ಪರಿಶಿಷ್ಟದಲ್ಲಿ Establishment of Mulberry Graft—

Nurseries at—(a) Mysore,
(b) Kolar,
(c) Siddlaghatta,
(d) Channapatna,

ಎಂದು ಹೇಳಿದ್ದೀರಿ. ಅದೇ ರಿಮಾರ್ಕ್ಸ್ ಕಾಲಂನಲ್ಲಿ 'Suitable lands are not available in Kolar' ಎಂದು ಹೇಳಿದ್ದೀರಿ. 'Suitable lands' ಎಂದರೆ ಏನು ಸ್ವಾಮಿ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಮಲ್ಬರಿ ಚೆನ್ನಾಗಿ ಬೆಳೆಯುವುದು ಮತ್ತು, ಹೆಚ್ಚು ಉತ್ಪನ್ನ ಬರುವುದು ಅಂಥಾದ್ದಕ್ಕೆ 'suitable lands' ಎಂದು ಹೇಳಬಹುದು.

ಶ್ರೀ ಜಿ. ನಾರಾಯಣಗೌಡ.—ಕೋಲಾರ ಜಿಲ್ಲೆಯಲ್ಲಿರುವಷ್ಟು ಶ್ರೇಷ್ಠವಾದ ಜಮೀನು ಈ ಮಲ್ಬರಿ ಬೆಳೆಗೆ ಮೈಸೂರು ದೇಶದಲ್ಲಿ ಇನ್ನೆಲ್ಲೂ ಇಲ್ಲ ಎಂದು ಹೇಳಿದರೆ ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಹೇಳುವುದಕ್ಕಾಗುವುದಿಲ್ಲ. ಕೆಲವು ಭಾಗ ಫಲವತ್ತಾಗಿರಬಹುದು.

ಶ್ರೀ ಜಿ. ನಾರಾಯಣಗೌಡ.—ಮೈಸೂರು ದೇಶದಲ್ಲಿ ಮಲ್ಬರಿ ಯೀಲ್ಡ್ ಜ್ಯೆಯಸ್ಟ್ ಎಲ್ಲಿ ಸ್ವಾಮಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೋಲಾರದಲ್ಲಿ ಬಹಳ ಚೆನ್ನಾಗಿ ಬೆಳೆಯುತ್ತದೆ ಎಂದು ಕೇಳಿದ್ದೇನೆ. ವಿಚಾರಮಾಡಿ ಹೇಳುತ್ತೇನೆ.

ಶ್ರೀ ಜಿ. ನಾರಾಯಣಗೌಡ.—ಚೆನ್ನಾಗಿ ಬೆಳೆದರೂ ಕೂಡ ಗ್ರಾಫ್ಟ್ ನರ್ಸರಿ ತೆಗೆಯುವುದಕ್ಕೆ ಅದು suitable land ಅಲ್ಲ ಎಂದು ಹೇಗೆ ಹೇಳುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದನ್ನು ಪುನಃ ವಿಚಾರ ಮಾಡಿನುತ್ತೇನೆ.

ಶ್ರೀ ಜಿ. ನಾರಾಯಣಗೌಡ.—ಹತ್ತಾರು ವರ್ಷದಿಂದ ಸೆರಿಕಲ್ಚರ್ ಡಿಪಾರ್ಟ್‌ಮೆಂಟಿನವರು ಕೋಲಾರದಲ್ಲಿ ಆರು ಎಕರೆ ಜಮೀನು ಕೇಳುತ್ತಾ ಇರುವುದು ತಮ್ಮ ಗಮನದಲ್ಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೆ.

ಶ್ರೀ ಜಿ. ನಾರಾಯಣಗೌಡ.—ಹಾಗಾದರೆ ಅದನ್ನು ಏಕೆ ಕೊಡಲಿಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಇನ್ನೂ ಪರಿಶೀಲನೆ ಮಾಡುತ್ತಾ ಇದ್ದೇವೆ.

ಶ್ರೀ ಜಿ. ನಾರಾಯಣಗೌಡ.—15 ವರ್ಷಗಳಿಂದ ಪರಿಶೀಲನೆಯಲ್ಲಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು ; ಏನು ಮಾಡುವುದು ?

ಶ್ರೀ ಜಿ. ನಾರಾಯಣಗೌಡ.—ಪರಿಶಿಷ್ಟದ ಕೊನೆಯ ಪುಟದಲ್ಲಿ subsidy to dig wells Rs. 50,000. ಎಂದು ಕೊಟ್ಟಿದ್ದೀರಿ. ಅದನ್ನು ಕೊಟ್ಟಿರುವುದು ಜನವರಿ 1956ರಲ್ಲಿ. ಈ ರೀತಿ 50 ಸಾವಿರ ರೂಪಾಯಿ ಬಂದಿದೆ ಎಂದು ಹೇಳಿ ಪ್ರಚಾರ ಮಾಡಿ ನಮ್ಮ ಜಿಲ್ಲೆಯಲ್ಲಿ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೀರಾ ? ಯಾರನ್ನು ಕೇಳಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಬಂದದ್ದೇ ಜನವರಿಯಲ್ಲಿ. ಆದ್ದರಿಂದ ಆ ಕಾರ್ಯಕ್ರಮಗಳನ್ನು ಹಾಕಿಕೊಂಡು ಇನ್ನು ಮುಂದುವರಿಯುವುದಕ್ಕೆ ಆಗಿಲ್ಲ. ಲ್ಯಾಪ್ಸ್ ಆಗುತ್ತದೆ ಎಂಬ ಭಯ ವಿರಬಹುದು. ಲ್ಯಾಪ್ಸ್ ಆಗುವುದಿಲ್ಲ, ಅದಕ್ಕೆ ವ್ಯವಹಾರ ನಡೆಸುತ್ತೇವೆ.

ಶ್ರೀ ಜಿ. ನಾರಾಯಣಗೌಡ.—ಲ್ಯಾಪ್ಸ್ ಆಗುವ ಪ್ರಶ್ನೆ ಅಲ್ಲ. ಈಗ ಬಂದದ್ದೇ ಲ್ಯಾಪ್ಸ್ ಆದ ಹಾಗೆ ಆಗಲಿಲ್ಲವೇ ? ಮುಂದೆ ಬರುವ ಗ್ರಾಂಟ್ ಮುಂದಿನ ವರ್ಷಕ್ಕೆ ಆಯಿತು. ಈ ವರ್ಷಕ್ಕೆ affect ಆಗುತ್ತದೆಯೇ ಇಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದೆರಡು ತಿಂಗಳು ಕಾಲವಿಳಂಬವಾಗುತ್ತದೆ. ನಿಜ. ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನಪಡುತ್ತೇವೆ.

ಶ್ರೀ ಜಿ. ನಾರಾಯಣಗೌಡ.—ಈ ಸಬ್‌ಸಿಡಿ ಬಂದರೂ ಕೂಡ ಸರ್ಕಾರದವರು ಸರಿಯಾಗಿ ವಿನಿಯೋಗಿಸುವುದಕ್ಕೆ ಮನಸ್ಸು ಮಾಡಿಲ್ಲ ಎಂದು ತಿಳಿದು ಕೊಳ್ಳೋಣವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರಿಯಾಗಿ ವಿನಿಯೋಗಿಸಿಲ್ಲ ಎಂಬ ಪ್ರಶ್ನೆ ಬರುವುದಿಲ್ಲ, ಕಾಲ ವಿಳಂಬವಾಗಿದೆ ಅಷ್ಟೆ.

ಶ್ರೀ ಜಿ. ನಾರಾಯಣಗೌಡ.—ಈ 50 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಇನ್ನೂ ಎಂಟು ದಿವಸದಲ್ಲಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಕಟ್ಟಡಗಳಿಗೆ ಸಿಮೆಂಟು ಮತ್ತು ಕಬ್ಬಿಣ ಸಿಕ್ಕದೇ ಕೆಲಸ ಮಾಡುವುದು ನಿಧಾನವಾಯಿತು ಎಂದು ಹೇಳಿದ್ದೀರಿ. ಕೇಂದ್ರ ಸರ್ಕಾರದ ಸಹಾಯದ್ರವ್ಯ ಇಷ್ಟು ಲಕ್ಷಗಟ್ಟಲೆ ಬರುತ್ತದೆ ಎಂಬುದು ಗೊತ್ತಿದ್ದೂ ಕೂಡ ಕಬ್ಬಿಣ ಮತ್ತು ಸಿಮೆಂಟು ಇವುಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸಿಕೊಳ್ಳಲು ಏಕೆ ಯೋಜನೆ ಮಾಡಲಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—Priority work out ಮಾಡಿ ಇದಕ್ಕಿಂತಲೂ ಪ್ರಾಮುಖ್ಯವಾದ ಕೆಲಸಗಳಿಗೆ ಹೆಚ್ಚಾಗಿ ಸಿಮೆಂಟು ಮತ್ತು ಕಬ್ಬಿಣ ಉಪಯೋಗಿಸುತ್ತಾ ಇರುವುದರಿಂದ ನ್ಯಲ್ಪ ತೊಂದರೆ ಆಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇದಕ್ಕಿಂತಲೂ ಮುಖ್ಯವಾದ ಕೆಲಸ ಎಂದರೆ ವಿಧಾನಸೌಧವೇ ಅಥವಾ ಬೇರೆ ಇತರ ಯಾವುದಾದರೂ ಕಟ್ಟಡಗಳೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಟ್ಟಡಗಳೇ ಅಲ್ಲದೆ ರಸ್ತೆಗಳಿಗೆ ಬೇಕಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕೇಂದ್ರ ಸರ್ಕಾರದಿಂದ ಸಹಾಯದ್ರವ್ಯ ಬರುತ್ತಾ ಇರತಕ್ಕದ್ದನ್ನು ಉಪಯೋಗಿಸಿಕೊಳ್ಳುವುದಕ್ಕೆ ಹೆಚ್ಚು ಪ್ರಾಮುಖ್ಯವಾದ ಕಟ್ಟಡದ ಕೆಲಸ ಯಾವುದಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೇಂದ್ರ ಸರ್ಕಾರದಿಂದ ಸಹಾಯದ್ರವ್ಯ ಬರುವುದು ನಿಜ. ದೇಶಕ್ಕೆ ರಸ್ತೆಗಳು ಅಗತ್ಯವಾಗಿ ಆಗಬೇಕಾಗಿದೆ. ಆದ್ದರಿಂದ ಅತಿ ಮುಖ್ಯವಾಗಿ ಆಗಬೇಕಾಗಿರುವ ಕೆಲಸ ಯಾವುದು ಎಂಬ ಒಂದು priority work out ಮಾಡಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—Well subsidy, ಯನ್ನು seed area ದಲ್ಲಿ ಮಾತ್ರ ಕೊಡುತ್ತಾ ಇದ್ದೀರಿ ಅಲ್ಲವೇ ?

Sri A. G. RAMACHANDRA RAO.—I want notice.

ಶ್ರೀ ಯು. ಎಂ. ಮಾದಪ್ಪ.—ಸೀಡ್ ಏರಿಯಾದಲ್ಲಿ ಮಾತ್ರವಲ್ಲದೆ ಸಂಸ್ಥಾನದಲ್ಲಿ ರೇಷ್ಮೆ ಎಲ್ಲೆಲ್ಲಿ ಬೆಳೆಯುತ್ತದೆಯೋ ಅಲ್ಲೆಲ್ಲಾ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಈ ಚಂದ್ರಿಕೆಗಳನ್ನು ಸಂಸ್ಥಾನಾಮಳೆ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಕೆಲವು ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಎರಡು ಮೂರು ಸಾರಿ ಟೆಂಡರ್ ಕರೆದು ಬಹಳ ಕಮ್ಮಿಯಾಗಿ ಟೆಂಡರ್ ಕೊಟ್ಟಿದ್ದರೂ ಕೂಡ ತೆಗೆದುಕೊಳ್ಳದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಯು. ಎಂ. ಮಾದಪ್ಪ—ಈ ಬೇಸಿಗೆ ಕಾಲದಲ್ಲಿ ಕಟ್ಟಡದ ಕೆಲಸ ಪುರು ಮಾಡದೇ ಹೀಗೆಯೇ ಮುಂದು ವರಿಸಿಕೊಂಡು ಹೋದದ್ದೇ ಆದರೆ ಮುಂದೆ ಮಳೆಗಾಲ ಪ್ರಾರಂಭವಾಗಿ 6-8 ತಿಂಗಳುಗಳ ಕಾಲ ಕೆಲಸ ನಡೆಯುವುದಕ್ಕೆ ಸಾಧ್ಯವಿಲ್ಲ ಎಂಬುದು ಗೊತ್ತೇ?

ಶ್ರೀ ಎ. ಜಿ. ರಾಮಚಂದ್ರರಾವ್.—ತ್ವರಿತಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಪಾಪಣ್ಣ.—ಪರಿಶಿಷ್ಟದಲ್ಲಿ, ಸ್ವಲ್ಪಮಟ್ಟಿಗೆ ಆರ್ಥಿಕ ಸಹಾಯವನ್ನು ಪಡೆದವು ಎಂಬುದರಲ್ಲಿ ಕ್ರಮ ಸಂಖ್ಯೆ ಎಂಟಕ್ಕೆ ಸಂಬಂಧಪಟ್ಟಂತೆ ಕಟ್ಟಡಗಳಿಗೆ ಒಂದು ಲಕ್ಷ 50 ಸಾವಿರ ರೂಪಾಯಿ ಸರಿಸುಮಾರಾಗಿ ವೆಚ್ಚವಾಗಬಹುದು ಎಂದು ಹೇಳಿದ್ದೀರಿ. ಇದಕ್ಕಾಗಿ 6-2-56ರಲ್ಲಿ ಸ್ಪೆಷಲ್ ಸಬ್-ಡಿವಿಜ್ ವ ರಂಜೂರಾಗಿದ್ದು, ಅಸಿಸ್ಟೆಂಟ್ ಇಂಜನಿಯರು ಕೆಲಸದ ಮೇಲೆ ಹಾಜರಾಗಿರುವುದಾಗಿ ರಿಪೋರ್ಟು ಮಾಡಿಕೊಂಡಿರುತ್ತಾರೆ ಎಂದು ಹೇಳಿದ್ದೀರಿ. ಹಾಗಿದ್ದರೆ ಈ ಎರಡು ತಿಂಗಳಿನಲ್ಲಿ ಒಂದು ಲಕ್ಷ 50 ಸಾವಿರ ರೂಪಾಯಿನ ಕೆಲಸ ಮಾಡಿ ಹಣ ಖರ್ಚು ಮಾಡುವುದಕ್ಕೆ ಹೇಗೆ ಸಾಧ್ಯ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಿಂದೆ ಕೆಲವು ತಿಂಗಳು ಕೆಲಸ ಮಾಡಿರುವುದರಿಂದಲೇ ಸ್ವಲ್ಪಮಟ್ಟಿನ ಹಣ ಖರ್ಚಾಗಿದೆ. ಸಾಧ್ಯವಾದ ಮಟ್ಟಿಗೂ ಹಣ ಖರ್ಚು ಮಾಡಿ ಕೆಲಸ ನಡೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಪಾಪಣ್ಣ.—ಈಗ ಏಷ್ಟು ಕೆಲಸ ಆಗಿದೆ, ಸ್ವಾಮಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಜಿ. ಪಾಪಣ್ಣ.—ಈಗ ಏನೇನೂ ಕೆಲಸ ಆಗಿಲ್ಲ.

* * *

ಶ್ರೀ ಕೆ. ವಿ. ಬೈರೇಗೌಡ.—ದೇವನಹಳ್ಳಿ ತಾಲ್ಲೂಕು ಗುಡವನ ಹಳ್ಳಿಯಲ್ಲಿ ರೇಷ್ಮೆ ಕೇಂದ್ರವನ್ನು ಸ್ಥಾಪಿಸುವುದಕ್ಕೆ ಐದು ವರ್ಷಗಳಿಂದ ಪ್ಲಾನ್ ಇಟ್ಟುಕೊಂಡಿದ್ದೀರಿ ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟು ವರ್ಷಗಳಿಂದ ಎಂಬುದು ಗೊತ್ತಿಲ್ಲ. ಅಂತೂ ಅದನ್ನು ಜಾಗ್ರತೆ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

---

* * * Expunged as ordered by Speaker.